ಶ್ರೀ ಎ. ಕೃಷ್ಣಪ್ಪ :— ಕರ್ನಾಟಕ ಸರ್ಕಾರಕ್ಕೆ ಬರಬೇಕಾದ ಡ್ಯೂಸ್ ಏನಿದೆ ಇದರಲ್ಲಿ ಲ್ಯಾಂಡ್ ಸೇರಿದಂತೆ ಎಲ್ಲಾ ನೋಡಲಿಕ್ಕೆ ಡಿಸಿ ಯವರಿಗೆ ಜವಾಬ್ದಾರಿ ಕೊಟ್ಟಿದ್ದೇವೆ. ಡೆಪ್ಯೂಟಿ ಕಮಿಷನರ್‌ರವರು ಈ ವಿಷಯವನ್ನು ಲ್ಯಾಂಡ್ ಆಂಡ್ ಪ್ರಾಪರ್ಟಿ ಸೇರಿದಂತೆ ಎಲ್ಲಾ ವಿಚಾರಗಳನ್ನು ನೋಡಿಕೊಳ್ಳುತ್ತಾರೆ.

ಶ್ರೀ ಕರಿಯಣ್ಣ :— ಆ ಪ್ರಾಸಗಿಯವರು ಯಾರು ಎಂಬುದನ್ನು ಹೇಳಲಿಲ್ಲ.

ಅಧ್ಯಕ್ಷರು :— ಪರಿಶೀಲನೆಯ ಹಂತದಲ್ಲಿ ಎಂದು ಅವರು ಹೇಳುತ್ತಾರಲ್ಲಾ ಇನ್ನೇನು?

ಶ್ರೀ ಎ. ಕೃಷ್ಣಪ್ಪ :— ಈಗಾಗಲೇ ನಾನು ಹೇಳಿದಂತೆ ಆ ಆಡಳಿತ ವರ್ಗದವರನ್ನು ಹಾಗೂ ಜಿಲ್ಲೆಯ ಶಾಸಕರನ್ನು ಕರೆಸಿ ಈ ವಾರದಲ್ಲಿ ಸಭೆ ಮಾಡುವುದಕ್ಕೆ ಏರ್ಪಾಡು ಮಾಡುತ್ತೇನೆಂದು ಹೇಳಿದ್ದೇನೆ. ಆ ದಿನ ನೀವು ಬೇಕಾದರೆ ಉಪ ಪ್ರಶ್ನೆಗಳು, ವಿವರ ಎಲ್ಲಾ ಹೇಳಿದರೂ ಕೂಡ ಸಮ್ಮುಖದಲ್ಲಿ ತೀರ್ಮಾನಿಸಿ ಉತ್ತರ ಕೊಡುತ್ತೇನೆ.

ಬೆಳ್ತಂಗಡಿ ತಾಲ್ಲೂಕಿನ ಮಾಲಾಡಿಯಲ್ಲಿರುವ ಐ.ಟಿ.ಐ ಶಿಕ್ಷಣ ಸಂಸ್ಥೆಯ ಕಟ್ಟಡ ನಿರ್ಮಾಣ.

246(1851) ಶ್ರೀ ಪ್ರಭಾಕರ ಬಂಗೇರ ಕೆ. (ಬೆಳ್ತಂಗಡಿ) :— ಮಾನ್ಯ ಕಾರ್ಮಿಕ ಮತ್ತು ವಕ್ಫ್ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳ್ತಂಗಡಿ ತಾಲ್ಲೂಕಿನ ಮಾಲಾಡಿಯಲ್ಲಿರುವ ಐ.ಟಿ.ಐ. ಶಿಕ್ಷಣ ಸಂಸ್ಥೆಗೆ ಮಂಜೂರಾಗಿರುವ ಭೂಮಿಯ ವಿಸ್ತೀರ್ಣ ಎಷ್ಟು; ಸಂಸ್ಥೆಗೆ ಬೇಕಾಗಿರುವ ಕಟ್ಟಡ ನಿರ್ಮಾಣಕ್ಕಾಗಿ ನೀಲಿನಕಾಶೆಯನ್ನು ತಯಾರಿಸಲಾಗಿದೆಯೆ;

ಆ) ಹಾಗಿದ್ದಲ್ಲಿ ಅದಕ್ಕೆ ಬೇಕಾಗಿರುವ ಹಣವನ್ನು ಮಂಜೂರು ಮಾಡಲಾಗಿದೆಯೆ;

ಇ) ಈ ಕಟ್ಟಡದ ಕಾಮಗಾರಿಯನ್ನು ಎಂದು ಪ್ರಾರಂಭಿಸಿ ಮುಗಿಸಲಾಗುವುದು?

ಶ್ರೀ ಎ.ಎಂ. ಹಿಂಡಸಗೇರಿ (ಕಾರ್ಮಿಕ ಮತ್ತು ವಕ್ಫ್ ಸಚಿವರು) :—

ಅ) 7 ಎಕರೆ 12 ಗುಂಟೆ. ಪೂರ್ಣ ಪ್ರಮಾಣದ ಕೈಗಾರಿಕಾ ತರಬೇತಿ ಸಂಸ್ಥೆಯ ನೀಲಿ ನಕಾಶೆಗಳು ಇನ್ನೂ ಸಿದ್ಧವಾಗಿರುವುದಿಲ್ಲ.

ಆ) ಇಲ್ಲ.

ಇ) ಇನ್ನೂ ನಿರ್ಧರಿತವಾಗಿಲ್ಲ.

ಶ್ರೀ ಪ್ರಭಾಕರ ಬಂಗೇರ ಕೆ. :— ಮಾನ್ಯ ಅಧ್ಯಕ್ಷರೆ, ಕಳೆದ ಸಾರಿ ನಾನು ಇದೇ ಪ್ರಶ್ನೆಯನ್ನು ಕೇಳಿದಾಗ, ಅದಕ್ಕೆ ಬೇಕಾದಂಥ ಜಾಗ ಇನ್ನೂ ಸಿಕ್ಕಿಲ್ಲ ಎಂದು ಹೇಳಿದ್ದು ಈ ಸಾರಿ 7 ಎಕರೆ 12 ಗುಂಟೆ ಜಾಗ ಇದೆ ಎಂದು ಹೇಳಿದ್ದಾರೆ. ಅಲ್ಲಿ ಈಗಾಗಲೇ ಐಟಿಐ, ಹಿರಿಯ ಪ್ರಾಥಮಿಕ ಶಾಲೆಯಲ್ಲಿ ನಡೆಯುತ್ತಿರುವುದರಿಂದ ಇವರಿಗೂ ತೊಂದರೆಯಾಗುತ್ತಿದ್ದು, ಬರುವ ಮಾರ್ಚ್ ಒಳಗಡೆ ಬೇಕಾಗುವ ಹಣವನ್ನು ಬಿಡುಗಡೆ ಮಾಡಿ ಆ ಕಟ್ಟಡದ ಕೆಲಸ ಮುಗಿಸಬೇಕೆಂದು ನಾನು ಸರ್ಕಾರವನ್ನು ಒತ್ತಾಯಿಸುತ್ತೇನೆ.

ಶ್ರೀ. ಎ.ಎಂ. ಹಿಂಡಸಗೇರಿ :— ದಕ್ಷಿಣ ಕನ್ನಡ ಜಿಲ್ಲೆಯ ಬೆಳ್ತಂಗಡಿ ತಾಲ್ಲೂಕಿನ ಮಾಲ್ಲಾಡಿ ಗ್ರಾಮದ ಸರ್ವೇ ನಂ.961 ಬಿ 2 ಹಾಗೂ 961 ಎ(2) ರಲ್ಲಿ ಒಟ್ಟಾರೆ 7 ಎಕರೆ 12 ಗುಂಟೆ ಜಮೀನನ್ನು ಪೂರ್ಣ ಪ್ರಣಾಣದ ಕೈಗಾರಿಕಾ ತರಬೇತಿ ಸಂಸ್ಥೆಯನ್ನು ಕಟ್ಟುವ ಸಲುವಾಗ ತೆಗೆದುಕೊಳ್ಳಲಾಗಿದೆ. ಆದರೆ ಜಮೀನು ಗುಡ್ಡ, ತಗ್ಗುಗಳಿಂದ ಕೂಡಿದ್ದು ಇದು ಸರಿಯಾಗಿಲ್ಲ. ಇದನ್ನು ಸರಿಪಡಿಸಲಿಕ್ಕೆ ಸುಮಾರು 25 ಲಕ್ಷ ರೂಪಾಯಿ ಖರ್ಚಾಗುತ್ತದೆ ಹಾಗೂ ಇದು ಬೆಳ್ತಂಗಡಿಯಿಂದ ಸುಮಾರು 12 ಕಿ.ಮೀ. ದೂರದಲ್ಲಿದೆ. ಆದ್ದರಿಂದ, ಬೇರೆ ಜಾಗವನ್ನು ನಾವು ಜಿಲ್ಲಾಧಿಕಾರಿಯನ್ನು ಕೇಳಿದರೆ ಅವರು ಸುಮಾರು ಮೂರು ಎಕರೆ ಜಮೀನನ್ನು ಕೂಡಲಿಕ್ಕೆ ತಯಾರಿದ್ದು, ನಾವು ಇದನ್ನು ಪರಿಶೀಲಿಸಿ ಮುಂಬರುವ ದಿನಗಳಲ್ಲಿ ಇದನ್ನು ಮಾಡಲಿಕ್ಕೆ ಪ್ರಯತ್ನಿಸಬಹುದೆಂದು ತಮ್ಮ ಮೂಲಕ ಮಾನ್ಯ ಸದಸ್ಯರಿಗೆ ತಿಳಿಯಬಯಸುತ್ತೇನೆ.

ಶ್ರೀ ಕೆ. ಪ್ರಭಾಕರ ಬಂಗೇರ :— ಇದು ಆ ಬೆಳ್ತಂಗಡಿಯಿಂದ 12 ಕಿ.ಮೀ. ದೂರದಲ್ಲಿ ಇರುವುದು ನಿಜ, ಗ್ರಾಮೀಣ ಪ್ರದೇಶಗಳಲ್ಲಿರುವ ಬಡ ವಿದ್ಯಾರ್ಥಿಗಳಿಗೆ ಇದರಿಂದ ಪ್ರಯೋಜನವಾಗುವುದರಿಂದ ಇದು ಇಷ್ಟು ದೂರ ಇದ್ದರೂ ಪರವಾಗಿಲ್ಲ. ಅಲ್ಲಿ ಕೊಟ್ಟಿರುವ ಪ್ರದೇಶ ಸಂಪೂರ್ಣವಾಗಿ ಗುಡ್ಡ ತಗ್ಗುಗಳಿಂದ ಕೂಡಿಲ್ಲ. ನಾನೂ ಕೂಡ ಹೋಗಿ ನೋಡಿದ್ದೇನೆ. ಆದ್ದರಿಂದ, ಕಂದಾಯ ಇಲಾಖೆಯ ಅಧಿಕಾರಿಗಳನ್ನು ಒಟ್ಟಾಗಿ ಸೇರಿಕೊಂಡು ಮತ್ತೊಮ್ಮೆ ಆ ಪ್ರದೇಶಕ್ಕೆ ಹೋಗಿ ಪರಿಶೀಲಿಸಿ ಅದೇ ಜಾಗದಲ್ಲಿ ಈ ಕೆಲಸ ಆಗಬೇಕೆನ್ನುವ ಒತ್ತಾಯ ಮಾಡುತ್ತಾ ಹಣವನ್ನು ಕೂಡಲೇ ಬಿಡುಗಡೆಗೊಳಿಸಬೇಕೆಂದು ಪುನ: ನಾನು ಒತ್ತಾಯ ಮಾಡುತ್ತೇನೆ.

ಶ್ರೀ ಎ.ಎಂ. ಹಿಂಡಸಗೇರಿ :— ಮಾನ್ಯ ಅಧ್ಯಕ್ಷರೆ, ಆ ಜಾಗ ಸರಿಯಿಲ್ಲವೆಂದು ನಾನು ಈಗಾಗಲೇ ಹೇಳಿದ್ದೇನೆ. ಆದ್ದರಿಂದ, ಇದನ್ನು ಮತ್ತೆ ಮರು ಪರಿಶೀಲನೆ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳಲಾಗುತ್ತದೆಂದು ಮಾನ್ಯ ಸದಸ್ಯರಿಗೆ ತಿಳಿಸುವುದಕ್ಕೆ ಇಷ್ಟಪಡುತ್ತೇನೆ.

ಶ್ರೀ ಪಿ.ಹೆಚ್. ಪೂಜಾರ್ :— ಮಾನ್ಯ ಅಧ್ಯಕ್ಷರೆ, ಬಾಗಲಕೋಟಿ ಜಿಲ್ಲೆಯಲ್ಲಿ ಮುಳುಗಡೆ ಆಗತಕ್ಕಂಥ ಪ್ರದೇಶದ ಜನರಿಗೆ ಪುನರ್ ವಸತಿ ಒದಗಿಸಿಕೊಟ್ಟಿರುವ

ಜಾಗದಲ್ಲಿ ಹೊಸದಾಗಿ ಎರಡು ಐ.ಟಿ.ಐ ಪ್ರಾರಂಭಮಾಡುವುದಕ್ಕೆ ಜಾಗದ ವ್ಯವಸ್ಥೆ ಮಾಡಿಕೊಡತಕ್ಕಂಥ ಕೆಲಸ ತಕ್ಷಣ ಮಾಡಬೇಕಾಗುತ್ತದೆಂದು ತಮ್ಮ ಮುಖಾಂತರ ಮಾನ್ಯ ಸಚಿವರಲ್ಲಿ ಕೇಳಿಕೊಳ್ಳುತ್ತೇನೆ.

ಶ್ರೀ. ಎ.ಎಂ. ಹಿಂಡಸಗೇರಿ :— ಮಾನ್ಯ ಅಧ್ಯಕ್ಷರೆ, ಈಗಾಗಲೇ ಕೆಲವು ಕಡೆ ಐ.ಟಿ.ಐ ಕೇಂದ್ರಗಳನ್ನು ಸ್ಥಾಪನೆ ಮಾಡುವುದಕ್ಕೆ ಜಾಗವನ್ನು ತೆಗೆದುಕೊಳ್ಳಲಾಗಿದೆ. ಹಾಗೆಯೇ ಬಾಗಲಕೋಟೆಯಲ್ಲಿಯೂ ಕೂಡ ಜಾಗಗ ತೆಗೆದುಕೊಂಡು ಶೀಘ್ರದಲ್ಲಿ ಮಾಡಿಕೊಡಲಾಗುತ್ತದೆಂದು ಈ ಸಂದರ್ಭದಲ್ಲಿ ಹೇಳುವುದಕ್ಕೆ ಇಷ್ಟಪಡುತ್ತೇನೆ.

ಶಿವಮೊಗ್ಗ ವಿಧಾನಸಭಾ ಕ್ಷೇತ್ರಕ್ಕೆ ಮಲೆನಾಡು ಪ್ರದೇಶ ಅಭಿವೃದ್ಧಿ ಮಂಡಳಿಯಿಂದ ಹಣ ಬಿಡುಗಡೆ.

247(2200) ಶ್ರೀ ಚಂದ್ರಶೇಖರಪ್ಪ ಹೆಚ್.ಎಂ. (ಶಿವಮೊಗ್ಗ) :— ಮಾನ್ಯ ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಮಲೆನಾಡು ಪ್ರದೇಶಾಭಿವೃದ್ಧಿ ಮಂಡಳಿಗೆ ನಬಾರ್ಡ್‌ನಿಂದ ಬಿಡುಗಡೆಯಯಾದ ಹಣವೆಷ್ಟು?

ಆ) ಶಿವಮೊಗ್ಗ ವಿಧಾನಸಭಾ ಕ್ಷೇತ್ರಕ್ಕೆ ಎಷ್ಟು ಹಣ ಬಿಡುಗಡೆ ಮಾಡಲಾಗಿದೆ. ವಿವರ ನೀಡುವುದು?

ಶ್ರೀ ರಮಾನಾಥ್ ರೈ (ಮೀನುಗಾರಿಕೆ, ಬಂದರು ಮತ್ತು ಪ್ರದೇಶಾಭಿವೃದ್ಧಿ ಸಚಿವರು) :—

ಅ) ನಬಾರ್ಡ್ ನೇರವಾಗಿ ಮಂಡಳಿಗೆ ಹಣ ಬಿಡುಗಡೆ ಮಾಡುವುದಿಲ್ಲ. ಮಂಡಳಿಯು ನಬಾರ್ಡ್ ಕಾಮಗಾರಿಗಳಿಗೆ ಖರ್ಚು ಮಾಡಿದ ಹಣವನ್ನು ನಬಾರ್ಡ್ ಸಂಸ್ಥೆಯು ಸರ್ಕಾರಕ್ಕೆ ಮರು ಪಾವತಿ ಮಾಡುತ್ತದೆ. ಈವರೆಗೂ ಮಂಡಳಿಯು ನಬಾರ್ಡ್ ಕಾಮಗಾರಿಗಳಿಗೆ 32.83 ಕೋಟಿ ರೂ.ಗಳನ್ನು ಖರ್ಚು ಮಾಡಿರುತ್ತದೆ.

ಆ) ಶಿವಮೊಗ್ಗ ಕ್ಷೇತ್ರದಲ್ಲಿ ನಬಾರ್ಡ್ ಕಾಮಗಾರಿಗಳ ವಿವರ ಕೆಳಗಿನಂತಿದೆ:

1) ಎನ್.ಆರ್‌ಪುರ ಸಿದ್ದಾಮಾಜಿ ಹೊಸೂರು ರಸ್ತೆ ಅಂದಾಜು ಮೊತ್ತ 35.50 ಲಕ್ಷ ರೂ.ಗಳು - ಖರ್ಚು 30.58 ಲಕ್ಷ ರೂಗಳಳು.

2) ಬಿ.ಹೆಚ್. ರೋಡ್ -ಕೆ.ಎಮ್. ಡೈರಿ -ಹೊಳೆಹೊನ್ನೂರು ರಸ್ತೆ, ಅಂದಾಜು ಮೊತ್ತ 29.12. ಲಕ್ಷ ರೂ.ಗಳು - ಖರ್ಚು 9.77 ಲಕ್ಷರೂ.ಗಳು